ಮತ್ತೊಂದು ಸುತ್ತೋಲೆಯನ್ನು ಈಗಾಗಲೇ ಇಷ್ಯೂ ಮಾಡಲಿಕ್ಕೆ ತಿಳಿಸಿದ್ದೇವೆ. ಇವತ್ತು ಜನರ ಪ್ರತಿನಿಧಿಗಳು ಯಾವುದೇ ಪಕ್ಷದವರೇ ಇರಬಹುದು, ಅಧಿಕಾರಿಗಳ ಹತ್ತಿರ ಹೋದಾಗ ಅಧಿಕಾರಿಗಳು ಗೌರವದಿಂದ ಅವರನ್ನು ಕಾಣಬೇಕು, ಹೇಗೆ ಕಾಣಬೇಕು ಎನ್ನತಕ್ಕ ವಿವರಗಳನ್ನು ಕೂಡ ತಯಾರು ಮಾಡುತ್ತಿದ್ದೇವೆ. ಅದಕ್ಕೆ ವಿರುದ್ಧವಾಗಿ ನಡೆಯತಕ್ಕ ಅಧಿಕಾರಿಗಳ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆ. ಪ್ರಜಾಪ್ರಭುತ್ವದಲ್ಲಿ ಇವತ್ತು ಅಧಿಕಾರಿಗಳು ಮೇಲುಗೈ ಸಾಧಿಸುವುದಕ್ಕೆ ಆಗುವುದಿಲ್ಲ. ಜನರೇ ಮೇಲುಗೈ ಸಾಧಿಸಬೇಕು. ಬರೀ ಜನರ ಪ್ರತಿನಿಧಿಗಳು ಅಷ್ಟೇ ಅಲ್ಲ, ಜನಸಾಮಾನ್ಯರು ಹೋದರೂ ಕೂಡ ಗೌರವ ಕೊಡತಕ್ಕಂಥ ಮೂಲಭೂತ ಸೌಜನ್ಯ ಇಲ್ಲದೆ ಇದ್ದರೆ ಹೇಗೆ? ಆದ್ದರಿಂದ ನಾನು ತಮ್ಮ ಸಲಹೆ ಒಪ್ಪುತ್ತೇನೆ. ಆದರೆ, ಇದು ಈ ಪ್ರಶ್ನೆಗೆ ನೇರವಾಗಿ ಬರುವುದಿಲ್ಲ. ತಾವು ಒಂದು ಕೆಲಸ ಮಾಡಿ. ಇದು ನಮ್ಮ ಜಿ. ಎ. ಡಿ. ಗೆ ಬರುತ್ತದೆ, ಜನರಲ್ ಆಡ್‌ಮಿನಿಸ್ಟ್ರೇಟೀವ್ ಇತ್ಯಾದಿ ಬೇಡಿಕೆಗಳು ಬಂದಾಗ ತಾವು ಭಾಷಣ ಮಾಡಿ ಹೇಳಿ. ನಾನು ಅಷ್ಟು ಹೊತ್ತಿಗೆ ವಿವರಗಳನ್ನು ಕೂಡ ಸಿದ್ದಗೊಳಿಸುತ್ತೇನೆ. ಆಗ ಉತ್ತರ ಕೊಡಲಿಕ್ಕೆ ನನಗೆ ಅನುಕೂಲ ಆಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಅಧ್ಯಕ್ಷಿಣಿಯವರೇ, ಇವತ್ತು ಒಬ್ಬ ಅಧಿಕಾರಿ ಆ ಮಟ್ಟಿಗೆ ನಡೆದ ಅಂದರೆ, ಅವನಿಗೆ ನೀವು ಸೌಜನ್ಯತೆ ಕಲಿಸದಿದ್ದರೆ ಹೇಗೆ? ಅವನಿಗೆ ಆಟ್‌ಲೀಸ್ಟ್ ಕಣ್ಣು ಕಾಣುವುದಿಲ್ಲ. ಅವನಿಗೆ ಜನರೇ ಕಾಣುವುದಿಲ್ಲ. ಶಾಸಕರೂ ಕಾಣುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ:- ನಿಮ್ಮ ಪ್ರಶ್ನೆ ಕೈ ಬಿಟ್ಟುಬಿಟ್ಟಿರಿ, ತಾವು ಜಿ. ಎ. ಡಿ. ಬಂದಾಗ ಮಾತನಾಡಿ. ಈಗ ಅದನ್ನೇ ಇಟ್ಟುಕೊಂಡು ಕುಟ್ಟುತ್ತಿದ್ದೀರಲ್ಲಾ?

ಉಪಾಧ್ಯಕ್ಷಿಣಿಯವರು:- ಈಗ ನಿಮ್ಮ ಪ್ರಶ್ನೆ ಮುಗಿಯಿತು. ಈಗ ಶ್ರೀಮತಿ ಮೋಟಮ್ಮನವರು ಮಾನ್ಯ ಕರಿಯಣ್ಣನವರ ಪರವಾಗಿ ಪ್ರಶ್ನೆ ಕೇಳಬಹುದು.

(ಗೊಂದಲ)

ಉಪಾಧ್ಯಕ್ಷಿಣಿಯವರು:- ಕೊನೇ ಉಪ ಪ್ರಶ್ನೆಯನ್ನು ಕೇಳಿಬಿಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಈಗ ಲೇಟೆಸ್ಟುಗಳಲ್ಲಿ ಇದುವರೆಗೂ ೩೭,೦೮೦ ಸೈಟುಗಳನ್ನು ಹಂಚಿಕೆ ಮಾಡಿದ್ದೀರಿ, ಇದುವರೆಗೂ ಬಿ. ಡಿ. ಎ. ಗೆ ಎಷ್ಟು ಮನವಿಗಳು ಬಂದಿವೆ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಎಸ್. ಬಂಗಾರಪ್ಪ:- ನೀವು ಈ ಪ್ರಶ್ನೆ ಕೇಳುವಾಗ ವಿವರವಾದ ಪ್ರಶ್ನೆ ಕೇಳಲಿಲ್ಲವಾದ್ದರಿಂದ ನಾವು ಉತ್ತರ ಕೊಡಲು ಬರುವ ಹಾಗೆ ಇಲ್ಲ. ಈಗ ಈ ಮನವಿಗಳನ್ನು ನಾನು ಹೇಗೆ ಕೊಡಲಿ, ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಯಾಕೆಂದರೆ ನೀವು ಇಲ್ಲಿ ಪ್ರಶ್ನೇನೇ ಕೇಳಲಿಲ್ಲ. ನಾನು ಉತ್ತರ ಕೊಡುವುದಕ್ಕೆ ಬರುವ ಹಾಗಿಲ್ಲ. ಕೊಡಬಾರದೆಂದು ಅಲ್ಲ; ನಾನು ತರಿಸಿ ತಮಗೆ ಕಳುಹಿಸಿ ಕೊಡುತ್ತೇನೆ.

ಸರ್ಕಾರಿ ಇಲಾಖೆಗಳಲ್ಲಿ ಪ. ಜಾ/ಪ. ಪಂ. ನೌಕರರು.

೨೧೬೫. ಶ್ರೀ ಕರಿಯಣ್ಣ (ಹೊಳೆ ಹೊಸ್ಸೂರು):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ

ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಎ, ಬಿ, ಸಿ, ಡಿ ವರ್ಗದ ಆಧಾರದ ಮೇಲೆ ಇಲಾಖಾವಾರು ಕಾರ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು?

ಆ) ಇದರಲ್ಲಿ ಇಲಾಖಾವಾರು ಎ, ಬಿ, ಸಿ, ಡಿ ದರ್ಜೆವಾರು ಹರಿಜನ / ಗಿರಿಜನರು ನೌಕರಿಯಲ್ಲಿರುವ ಸಂಖ್ಯೆ ಎಷ್ಟು?

ಇ) ಹರಿಜನ-ಗಿರಿಜನರಿಗೆ ಸಂವಿಧಾನಬದ್ಧವಾದ ಶೇಕಡ ೧೮ರಂತೆ ನೌಕರಿ ಸಿಕ್ಕಿರುವುದೆ?

ಈ) ಹಾಗಿಲ್ಲದಿದ್ದಲ್ಲಿ ಮೀಸಲಾತಿಯ ಕೊರತೆ ತುಂಬಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು):-

ಅ) ದಿನಾಂಕ ೩೧-೩-೧೯೯೧ರ ವೇಳೆಗೆ ಇದ್ದ ರಾಜ್ಯ ಸರ್ಕಾರಿ ನೌಕರರ ಸಂಖ್ಯೆ ೪,೦೭,೪೯೪. ಅದರಲ್ಲಿ ಎ, ಬಿ, ಸಿ, ಡಿ ವರ್ಗಕ್ಕೆ ಸೇರಿದವರ ಮಾಹಿತಿಯು ಈ ಕೆಳಕಂಡಂತಿದೆ:-

ಗುಂಪು-ಎ ೧೧೬೯೨

ಗುಂಪು-ಬಿ ೧೯೮೦೨

ಗುಂಪು-ಸಿ ೨೮೧೦೦೩

ಗುಂಪು-ಡಿ ೯೪೯೭

ಈವರೆಗಿನ ಇಲಾಖಾವಾರು ಮಾಹಿತಿ ಲಭ್ಯವಿರುವುದಿಲ್ಲ.

ಆ) ೧೯೯೧ನೇ ಮಾರ್ಚಿ ತಿಂಗಳ ಅಂತ್ಯದವರೆಗಿನ ಮಾಹಿತಿಯು ಈ ಕೆಳಕಂಡಂತಿದೆ:-

	ಪರಿಶಿಷ್ಟ ಜಾತಿ		ಪರಿಶಿಷ್ಟ ವರ್ಗ	
	ಒಟ್ಟು ನೌಕರರ ಸಂಖ್ಯೆ	ಶೇಕಡಾವರು	ಒಟ್ಟು ನೌಕರರ ಸಂಖ್ಯೆ	ಶೇಕಡಾವಾರು
	೧	೨	೩	೪
ಗುಂಪು - ಎ	೧೫೪೫	೧೩.೨೧	೨೭೧	೨.೩೨
ಗುಂಪು - ಬಿ	೧೭೨೨	೮.೭೦	೩೬೩	೧.೮೩
ಗುಂಪು - ಸಿ	೩೪೪೯೨	೧೨.೨೭	೫೭೧೫	೨.೦೩
ಗುಂಪು - ಡಿ	೧೯೦೨೮	೨೦.೦೩	೨೯೯೧	೩.೧೫

ಇ) — ಇಲ್ಲ —

ಈ) ಶೇಕಡಾವಾರಿನಲ್ಲಿ ಈ ಜಾತಿಗಳ/ವರ್ಗಗಳ ಜನರ ಸಂಖ್ಯೆಯನ್ನು ಕಾಯ್ದುಕೊಳ್ಳಲು ಸರ್ಕಾರವು ಸತತ ಪ್ರಯತ್ನ ಮಾಡುತ್ತಲೇ ಇದೆ. ಆವುಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮೀಸಲಾಗಿರಿಸಲಾದ ಹುದ್ದೆಗಳಲ್ಲಿ 'ಬ್ಯಾಕ್‌ಲಾಗ್' ಸ್ಥಾನಗಳನ್ನು ವಿಶೇಷ ಪ್ರಯತ್ನದ ಮೂಲಕ

ಭರ್ತಿ ಮಾಡುವಂತೆ ಆದೇಶ ಹೊರಡಿಸಲಾಗಿದೆ. ಇದಕ್ಕಾಗಿ ಆರ್ಥಿಕ ಮಿತವ್ಯಯದ ಆದೇಶಗಳನ್ನು ಸಡಿಲಗೊಳಿಸಲಾಗಿದೆ ಹಾಗೂ ನೇರ ನೇಮಕಾತಿಯ ಪ್ರತಿಬಂಧಕಾಜ್ಞೆಯನ್ನು ಕೂಡ ಸಡಿಲಿಸಿ ಆದೇಶ ಹೊರಡಿಸಲಾಗಿದೆ. ಯಾವ ಯಾವ ವರ್ಗಗಳಲ್ಲಿ ಶೇಕಡ ೧೫ ಮತ್ತು ೩ ಮಟ್ಟ ತಲುಪಿಲ್ಲವೋ ಆ ವರ್ಗಗಳಿಗೆ ನೇರ ನೇಮಕಾತಿ ಮಾಡುವಾಗ ಮೀಸಲಾತಿಯನ್ನು ಶೇಕಡ ೨೦ ಮತ್ತು ೫ ಕ್ಕೆ ಅನುಕ್ರಮವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಕಾಯ್ದಿರಿಸಿ ಆದೇಶ ಹೊರಡಿಸಲಾಗಿದೆ. ಇದಲ್ಲದೆ ಪ್ರತಿಭಾವಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ 'ಎ' ಮತ್ತು 'ಬಿ' ಗುಂಪಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ವಿಶೇಷ ನಿಯಮಾವಳಿಯನ್ನು ರಚಿಸಲಾಗಿದೆ.

ಶ್ರೀಮತಿ ಮೋಟಮ್ಮ:- ಸನ್ಮಾನ್ಯ ಸಭಾಧ್ಯಕ್ಷರೆಯವರೇ, ಈಗ ತಾನೇ ನನ್ನ ಹಿಂದಿನ ಪ್ರಶ್ನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ರಿಸರ್‌ವೇಷನ್ ಬಗ್ಗೆ ಭರವಸೆ ಮತ್ತು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿ ಮಾನ್ಯ ಕರಿಯಣ್ಣನವರು ಬಹಳ ಸ್ಪಷ್ಟವಾಗಿ ಕೇಳಿದ್ದಾರೆ. ಇಡೀ ರಾಜ್ಯದ ಎಲ್ಲಾ ಇಲಾಖೆಗಳಲ್ಲಿರುವ ಟೋಟಲ್ ಎಂಪ್ಲಾಯೀಸ್ ಎಷ್ಟು ಹಾಗೂ ಅದರಲ್ಲಿ ಹರಿಜನ ಗಿರಿಜನ ನೌಕರರುಗಳು ಎಷ್ಟು ಇದ್ದಾರೆ ಅಂಥ. ಕ್ಲಾಸ್ ೧ರಲ್ಲಿ, ಕ್ಲಾಸ್ ೨ರಲ್ಲಿ ಮತ್ತು ಕ್ಲಾಸ್ ೩ರಲ್ಲಿ ನೋಡಿದರೆ, ಕ್ಲಾಸ್ 'ಎ' ನಲ್ಲಿ ೧೧,೬೯೨ ಟೋಟಲ್ ಎಂಪ್ಲಾಯೀಸ್ ಇದ್ದರೆ ಅದರಲ್ಲಿ ಹರಿಜನರು ಇರುವುದು ೧,೫೪೫. ಅಲ್ಲಿಗೆ ಶೇಕಡ ೧೩ ಆಗುತ್ತದೆ. ಹಾಗೇನೇ ಕ್ಲಾಸ್ ೨ ಅಂದರೆ 'ಬಿ' ಗ್ರೂಪ್‌ನಲ್ಲಿ ೧೯,೮೦೨ ನಲ್ಲಿ ಹರಿಜನರಿರುವುದು ೧,೭೨೨ ಅಂದರೆ ಶೇಕಡ ೮.೭೦ ರಷ್ಟು ಆಗುತ್ತದೆ. ಹಾಗೇನೇ 'ಸಿ' ಗ್ರೂಪ್‌ನಲ್ಲಿ ೨,೮೧,೦೦೩ ಇದ್ದರೆ ಅದರಲ್ಲಿ ಸುಮಾರು ೩೪,೯೯೨ ಅಂದರೆ ಶೇಕಡ ೧೨ ಆಗುತ್ತದೆ. ಹೀಗೆ ಪ್ರತಿಯೊಂದರಲ್ಲೂ ಶೇಕಡ ೧೮ರಷ್ಟು ತುಂಬಲಿಕ್ಕೆ ಆಗಲಿಲ್ಲ. ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೊನೆಯಲ್ಲಿ ಹೀಗೆ ಹೇಳುತ್ತಿದ್ದಾರೆ, ಏನೆಂದರೆ, ವಿಶೇಷ ಪ್ರಯತ್ನದ ಮೂಲಕ ಈ ಬ್ಯಾಕ್‌ಲಾಗ್ ಅನ್ನು ಭರ್ತಿಮಾಡುವಂತೆ ಆದೇಶ ಹೊರಡಿಸಲಾಗಿದೆ. ಮತ್ತು ಆರ್ಥಿಕ ಮಿತಿ ಮೇಲಿನ ಆದೇಶಗಳನ್ನು ಸಡಿಲಗೊಳಿಸಲಾಗಿದೆ ಎಂದು. ಈ ಆದೇಶವನ್ನು ಯಾವಾಗ ಹೊರಡಿಸಲಾಗಿದೆ ಮತ್ತು ಇದು ಅಂಬೇಡ್ಕರ್‌ರವರ ಜನ್ಮ ಶತಾಬ್ದಿ ವರ್ಷವಾದ್ದರಿಂದ, ಈ ಶೇಕಡ ೧೮ರಷ್ಟು ಏನಿದೆ ಅದು ಎಸ್. ಸಿ. ಮತ್ತು ಎಸ್. ಟಿ.ಯವರಿಗೆ ಆ ಕೋಟಾವನ್ನು ತುಂಬಲಿಕ್ಕೆ ಈ ವರ್ಷನೇ ಪ್ರಯತ್ನ ಮಾಡುತ್ತಾರೆಯೇ?

೧೦.೫೫ ಎ. ಎಂ.

ಶ್ರೀ ಎಸ್. ಬಂಗಾರಪ್ಪ:- ತಮ್ಮ ಮೊದಲನೇ ಪ್ರಶ್ನೆಗೆ ಸಾಕಷ್ಟು ಉತ್ತರವನ್ನು ಕೊಟ್ಟಿದ್ದೇನೆ. ಅಲ್ಲದೆ ಇದನ್ನು ಕವರ್ ಮಾಡಿದ್ದೇನೆ. ನಾವೇ ಒಂದು ವಿಚಾರದಲ್ಲಿ ಒಪ್ಪಿಕೊಂಡಿದ್ದೇವೆ. ಎಲ್ಲವನ್ನೂ ಅಷ್ಟು ವಿವರವಾಗಿ ಮಾತನಾಡುವುದಕ್ಕಿಂತ ಈ ಹರಿಜನ ಗಿರಿಜನರಿಗೆ ಸಂವಿಧಾನ ಬದ್ಧವಾಗಿ ಶೇಕಡ ೧೮ರಂತೆ ನೌಕರಿ ಸಿಕ್ಕಿದೆಯೇ ಎಂದು ಮಾನ್ಯ ಕರಿಯಣ್ಣನವರು ಕೇಳಿದ್ದಾರೆ. ಇದಕ್ಕೆ ನಮ್ಮ ಉತ್ತರ 'ಇಲ್ಲ' ಎಂದು ನಾವೇ ಒಪ್ಪಿಕೊಂಡಿದ್ದೇವೆ. ಆಂದಮೇಲೆ ಶೇಕಡಾವಾರು ಎಷ್ಟು ಎಂಬುದು ಗೊತ್ತಾಗುತ್ತದೆ. ಆದರೆ ಇದರ ಅರ್ಥ ಏನೆಂದರೆ ಅದು ಬಡ್ತಿ ಪ್ರಶ್ನೆ ಇರಬಹುದು, ಅಥವಾ ನೇಮಕಾತಿ ಪ್ರಶ್ನೆ ಇರಬಹುದು, ರಿಸರ್ವೇಷನ್‌ಕೋಟಾ ಇರಬಹುದು. ಇದರಲ್ಲಿ ಸಂಪೂರ್ಣವಾಗಿ ಇಲ್ಲ ಎಂದು ಸರ್ಕಾರ ಒಪ್ಪಿಕೊಂಡಮೇಲೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದು

ನಮ್ಮ ಮುಂದೆ ಉಳಿಯುತ್ತದೆ. ಈಗಾಗಲೇ ನಾನು ತಮ್ಮ ಮುಖಾಂತರ ಈ ಸದನಕ್ಕೆ ತಿಳಿಸಿದ್ದೇನೆ; ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಪ್ರೊಮೋಶನಲ್ ಅಪರ್ಚುನಿಟೀಸ್‌ನಿಂದ ತುಂಬುವುದಕ್ಕೆ ಮೊದಲು ಬ್ಯಾಕ್‌ಲಾಗ್ ತುಂಬದೆ ಬೇರೆ ಯಾವುದನ್ನೂ ಮಾಡಬಾರದೆಂದು ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡಿದ್ದೇವೆ. ಈ ರೀತಿ ತುಂಬುವುದಕ್ಕೆ ನಾವು ಆದೇಶವನ್ನು ಕೊಟ್ಟಿದ್ದೇವೆ. ಅದನ್ನು ಜಾರಿಗೆ ಕೊಡತಕ್ಕ ಸಂಪೂರ್ಣ ಮನಸ್ಸನ್ನು ನಾವು ಇಟ್ಟುಕೊಂಡೇ ಕೆಲಸ ಮಾಡಿದ್ದೇವೆ. ಈಗಾಗಲೇ ತಮ್ಮ ಎಲ್ಲಾ ಪ್ರಶ್ನೆಗಳಿಗೂ ನಾನು ಉತ್ತರವನ್ನು ಕೊಟ್ಟಿದ್ದೇನೆ. ಆದ್ದರಿಂದ ಈ ಪ್ರಶ್ನೆ ಮತ್ತೆ ಉದ್ಭವಿಸುವುದಿಲ್ಲ.

ಶ್ರೀಮತಿ ಮೋಟಮ್ಮ:- ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಕೂಡ ೧೮ ಪರ್ಸೆಂಟ್ ಫಿಲಪ್ ಆಗಿಲ್ಲ. ಅಲ್ಲಿಯೂ ಕೂಡ ೧೮ ಪರ್ಸೆಂಟ್ ತುಂಬುವುದಕ್ಕೆ ಆದೇಶ ಕೊಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ:- ಈ ಪ್ರಶ್ನೆ ಇಲ್ಲಿ ಬಂದಿಲ್ಲ. ಇದು ಸರ್ಕಾರೀ ನೌಕರರಿಗೆ ಮಾತ್ರ ಎಂದು ತಾವು ಹೇಳಿದ್ದೀರಿ. ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಎಂದರೆ ನಮ್ಮ ಸರ್ಕಾರೀ ಸ್ವಾಮ್ಯತ್ವದಲ್ಲಿ ಅನೇಕ ಫ್ಯಾಕ್ಟರಿಗಳಿವೆ. ಈ ನೀತಿಯನ್ನು ಅಲ್ಲೂ ಕೂಡ ಅನುಸರಿಸಬೇಕೆಂದು ಈಗಾಗಲೇ ನಾವು ತಿಳಿಸಿದ್ದೇವೆ. ಕಾರ್ಪೋರೇಷನ್‌ಗಳು, ಬೋರ್ಡ್‌ಗಳೂ ಕೂಡ ಈ ರಿಸರ್ವೇಷನ್ ಪಾಲಿಸಿಯನ್ನು ಅನುಸರಿಸಬೇಕೆಂದು ಹೇಳಿದ್ದೇವೆ. ಇದೇ ರೀತಿ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲೂ ಕೂಡ ಮಾಡಬೇಕೆಂದು ಆಸೆಯನ್ನಿಟ್ಟುಕೊಂಡಿದ್ದೇವೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಕುಡಿಯುವ ನೀರಿನ ಅಭಾವದ ಬಗ್ಗೆ

೧೨೦೪. ಶ್ರೀ ಎಸ್. ಎಸ್. ಪಾಟೀಲ್ (ಶಿರಹಟ್ಟಿ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಹಟ್ಟಿ ತಾಲ್ಲೂಕಿನ ಲಕ್ಷ್ಮೇಶ್ವರ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಸಮಸ್ಯೆಯನ್ನು ನಿವಾರಿಸಲು ಕೈಗೊಂಡ ಕ್ರಮವೇನು?

ಶ್ರೀ ಕೆ. ಜೆ. ಜಾರ್ಜ್:- (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಹೌದು.

ಆ) ಕುಡಿಯುವ ನೀರಿನ ತೀವ್ರ ಅಭಾವವನ್ನು ನೀಗಿಸಲು ಬರಗಾಲ ಕಾಮಗಾರಿಯಡಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಇದಲ್ಲದೇ ಈ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಯೋಜನೆಯನ್ನು ತಯಾರಿಸಲು ತನಿಖೆಯನ್ನು ಮಾಡಲಾಗುತ್ತಿದೆ.

ಶ್ರೀ ಎಸ್. ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷಣಿಯವರೇ, ಈ ಸಮಸ್ಯೆಯನ್ನು ನಿವಾರಿಸಲು ಕೈಗೊಂಡ ಕ್ರಮವೇನು? ಕುಡಿಯುವ ನೀರಿನ ಅಭಾವವನ್ನು ಆಗಿಂದಾಗ್ಗೆ ನೀಗಿಸಲು ಏನು ಪರಿಹಾರ ಕಾರ್ಯ ಕ್ರಮಗಳನ್ನು ಕೈಗೊಂಡಿದ್ದೀರಿ ಎಂದರೆ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಎಂದು ಹೇಳಿದ್ದೀರಿ ಹಾಗೂ ಈ ಪಟ್ಟಣಕ್ಕೆ ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಲು ಯೋಜನೆಯನ್ನು